# ಚತುರ್ವೇದಿ ನೆನಪಿನಲ್ಲಿ...

**ರಾಜ್ಯಪಾಲರನ್ನು ಭೇಟಿಯಾಗಿ ಮಾತನಾಡಿಸುವುದು ಜನಸಾಮಾನ್ಯರಿಗೆ ಆಗದ ವಿಷಯ. ಆದರೆ ರಾಜ್ಯಪಾಲರಾಗಿದ್ದ ಟಿ.ಎನ್. ಚತುರ್ವೇದಿ ಅವರನ್ನು ಮುಖತಃ ಭೇಟಿಯಾಗಿ ಅವರೊಂದಿಗೆ ಕೆಲಹೊತ್ತು ಒಡನಾಡಿದ್ದು ಸವಿನೆನಪಾಗಿ ಉಳಿದಿದೆ.**

■ ಬೀರಣ್ಣ ನಾಯಕ ಮೊಗಟಾ



ಹದಿಮೂರು ವರುಷಗಳ ಹಿಂದಿನ ಘಟನೆ, ಅದು ಮನದಾಳದಲ್ಲಿ ಇನ್ನೂ ಹಸಿರಾಗಿದೆ. ರಾಜಕಾರಣದಲ್ಲಿರುವ ಅನೇಕರು ನನ್ನ ಮಿತ್ರರೇ ಆಗಿರುವುದರಿಂದ, ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೂ ಮಿತ್ರರ ಸಾಲಿನಲ್ಲಿರುವುದರಿಂದ, ಹಿರಿಯ ಅಧಿಕಾರಿಗಳೂ ಆತ್ಮೀಯರಾಗಿರುವುದರಿಂದ ಅವರೆಲ್ಲರ ಜೊತೆಗೆ ನಾನು ಆತ್ಮೀಯವಾಗಿ ಓಡಾಡಿದ್ದೇನೆ. ಆದರೆ ರಾಜ್ಯಪಾಲರ ಹತ್ತಿರ ಒಮ್ಮೆಯೂ ಹೋಗಿರಲಿಲ್ಲ.

ನಾನು ಸ್ನಾತಕೋತ್ತರ ಪದವಿ ಓದುತ್ತಿರುವಾಗ ಅಂದಿನ ನನ್ನ ಸಹಪಾಠಿ ಆಕಾಶವಾಣಿ ಕೇಂದ್ರದ ನಿವೃತ್ತ ನಿಲಯ ನಿರ್ದೇಶಕರಾಗಿದ್ದ ಸಿ.ಯು. ಬೆಳ್ಳಕ್ಕಿ ಅವರ ಜೊತೆ ಬೆಂಗಳೂರಿಗೆ ಹೋದಾಗ ರಾಜ್ಯಪಾಲರ ಅಧಿಕೃತ ನಿವಾಸ ರಾಜಭವನದ ಒಳಗೆ ಹೋಗಲು ಪ್ರಯತ್ನಿಸಿದೆ. ಆದರೆ ಅಂದು ನಮ್ಮ ಪ್ರಯತ್ನ ಫಲಕಾರಿಯಾಗಿರಲಿಲ್ಲ. ಅಂದಿನಿಂದ ರಾಜ್ಯಪಾಲರನ್ನೊಮ್ಮೆ ಭೇಟಿಯಾಬೇಕೆಂಬುದು ನನ್ನ ಹಂಬಲವಾಗಿತ್ತು.

ಸ್ನಾತಕೋತ್ತರ ಪದವಿ ಮುಗಿಸಿದ ನಂತರ ನಾನು ಕಾಲೇಜಿನ ಉಪನ್ಯಾಸಕನಾಗಿ ನನ್ನ ವೃತ್ತಿ ಜೀವನ ಪ್ರಾರಂಭಿಸಿದರೆ ನನ್ನ ಮಿತ್ರ ಸಿ.ಯು.ಬೆಳ್ಳಕ್ಕಿ ಆಕಶವಾಣಿಯಲ್ಲಿ ತಮ್ಮ ವೃತ್ತಿಯನ್ನು ಕಂಡು ಕೊಂಡರು. ನಾವಿಬ್ಬರು ಆಗಾಗ ಭೇಟಿಯಾದಾಗ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಓದುವಾಗ ಬೆಂಗಳೂರಿಗೆ ಹೋದದ್ದು, ಅಲ್ಲಿ ರಾಜಭವನದ ಒಳಗೆ ಹೋಗಲು ಪ್ರಯತ್ನಿಸಿದ್ದು, ಪ್ರಯತ್ನಕ್ಕೆ ಫಲ ಸಿಗದೆ ಇದ್ದಾಗ ನಿರಾಶರಾಗಿ ಮರಳಿ ಬಂದದ್ದನ್ನೆಲ್ಲ ನೆನಪಿಸಿಕೊಳ್ಳುತ್ತಿದ್ದೆವು.

ಒಮ್ಮೆ ಕಾರ್ಯಕ್ರಮ ಒಂದಕ್ಕೆ ನಾನು ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರಕ್ಕೆ ರಾಜ್ಯಪಾಲರು ಬರುವುದು ನಿಗದಿಯಾಯಿತು. ಅದು FIFTH INTERNATIONAL CONFERENCE OF ICSP and FIRST NATIONAL CONFERENCE OF KDP ಕಾರ್ಯಕ್ರಮ. ಆ ಸಮ್ಮೇಳನಕ್ಕೆ ದೇಶ ವಿದೇಶದಿಂದ ನೂರಾರು ಪ್ರತಿನಿಧಿಗಳು ಯಲ್ಲಾಪುರಕ್ಕೆ ಆಗಮಿಸಿದ್ದರು. ಯಲ್ಲಾಪುರದ ಈಶ್ವರೀಯ ವಿಶ್ವ ವಿದ್ಯಾಲಯ ತಪೋವನದಲ್ಲಿ 2006 ಜುಲೈ 16ರಂದು ನಡೆದ ಐತಿಹಾಸಿಕ ಸಮ್ಮೇಳನವನ್ನು ರಾಜ್ಯಪಾಲರು ಉದ್ಘಾಟಿಸ ಬೇಕಾಗಿತ್ತು. ಆ ಸಮ್ಮೇಳನದ ಸಂಘಟಕರಲ್ಲಿ ನಾನೂ ಒಬ್ಬನಾದರೂ ಮೊದಲನೆ ದಿನವೇ ಬಂದು ತಂಗಿದ್ದ ಅಂದಿನ ರಾಜ್ಯಪಾಲರಾದ ಟಿ.ಎನ್.ಚತುರ್ವೇದಿ ಅವರನ್ನು ಭೇಟಿಯಾಗಲು ಬಿಗಿಯಾದ ಕಾವಲು ಪಡೆ ಇದ್ದುದರಿಂದ ಸಾಧ್ಯವಾಗಲಿಲ್ಲ.

ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ರಾಜ್ಯಪಾಲರ ಹಿಂದೆ ನಾನಿದ್ದೆ. ಉದ್ಘಾಟನಾ ಸಮಾರಂಭ ಮುಗಿದ ನಂತರ ಈಶ್ವರೀಯ ವಿಶ್ವವಿದ್ಯಾಲಯ ತಪೋವನದ ಪ್ರಾಂಶುಪಾಲರಾದ ಡಾ.ಬಿ.ಕೆ.ಪದ್ಮಕ್ಕಾ ಅವರು ತಮ್ಮ ಆತಿಥ್ಯ ಸ್ವೀಕರಿಸಲು ಬರುವಂತೆ ರಾಜ್ಯಪಾಲರನ್ನು ವಿನಂತಿಸಿದರು. ಅವರು ಒಪ್ಪಿದ ನಂತರ ನನಗೆ ರಾಜ್ಯಪಾಲರನ್ನು ಕರೆತರುವಂತೆ ಕೇಳಿಕೊಂಡರು. ರಾಜ್ಯಪಾಲರ ಜೊತೆಗೆ ಅವರ ಕಾರಿನಲ್ಲಿಯೇ ತೆರಳಿ ತಪೋವನದ ಅತಿ ದೊಡ್ಡ ಈಶ್ವರಲಿಂಗ, ತಪೋವನದ ಬೇರೆ ಬೇರೆ ಪ್ರದೇಶವನ್ನು ರಾಜ್ಯಪಾಲರಿಗೆ ತೋರಿಸುವ ಅವಕಾಶ ಸಿಕ್ಕಿದ್ದು ನನ್ನ ಜೀವನದ ಮರೆಯಲಾಗದ ಸವಿನೆನಪು. ಯಲ್ಲಾಪುರದ ಬಗ್ಗೆ, ನಮ್ಮ ಜಿಲ್ಲೆಯ ಬಗ್ಗೆ ಅನೇಕ ಮಾಹಿತಿಗಳನ್ನು ಕೇಳಿ ಸಂಗ್ರಹಿಸಿದರು. ಅವರ ಜೊತೆಯಲ್ಲಿ ಅನೇಕ ಫೋಟೊ ಸೆಷನ್‌ಗಳು ಕೂಡ ನಡೆದವು. ಮೊದಲನೆ ದಿನ ರಾಜ್ಯಪಾಲರನ್ನು ಭೇಟಿಯಾಗಲು ನಾನು ಹೊರಟಾಗ ಬಿಡದ ಪೊಲೀಸ್ ಅಧಿಕಾರಿಗಳು ಅಂದೂ ಇದ್ದರು!

ಇಂದು ಟಿ.ಎನ್. ಚತುರ್ವೇದಿಯವರು ನಮ್ಮಿಂದ ದೂರವಾದರೂ (05–01–2020) ಈ ತೆರನಾದ ಸವಿ ಸವಿನೆನಪನ್ನು ಮರೆಯಲಾದೀತೆ?

'ಮರೆವು' ನೆನಪಿನ ಶತ್ರು ಎನ್ನುವುದುಂಟು. ಆದರೆ ಅದು ಶತ್ರುವೂ ಹೌದು, ಮಿತ್ರನು ಹೌದು. ಜೀವನದ ಕಹಿ ಘಟನೆಗಳಿಗೆ ಮರೆವು ಮಿತ್ರನಾದರೆ, ಸಿಹಿ ಘಟನೆಗಳಿಗೆ ಶತ್ರುವು ಹೌದು! ■